## ಭಾವನೆಗಳ ಭಾವಧಾರೆ

ಆಗಸ್ಟ್ 26ರಂದು ಕವಿ, ಕಲಾವಿದರನ್ನು ಒಗ್ಗೂಡಿಸಿ, ಹೊಸ ಭಾವಧಾರೆಗಳ ರಸಾನುಭವಗಳನ್ನು ಪ್ರೇಕ್ಷಕರಿಗೆ ನೀಡಿ ಮನಸ್ಸಂತೋಷಗೊಳಿಸಿದವರು ಮಾತಲ್ಲೇ ಒಲಿಸುವ ಕೃಷ್ಣೇಗೌಡರು. ಕುವೆಂಪು, ಬೇಂದ್ರೆ, ಜಿ.ಪಿ. ರಾಜರತ್ನಂರವರ ಕವಿತೆಗಳನ್ನು, ಸುನೀತ ಮತ್ತು ವಿನಯರವರ ಸುಮಧುರ ಕಂಠದಿಂದ ಹಾಡಿಸಿ, ಅದರ ಅರ್ಥ ವಿಶ್ಲೇಷಣೆಯನ್ನು, ಉಪಮೇಯಗಳೊಂದಿಗೆ ವಿಶ್ಲೇಷಿಸುತ್ತಾ, ದಿಗ್ವಿಜಯ ವಾಹಿನಿಯ ಮೂಲಕ ಕನ್ನಡಿಗರನ್ನು ಬಡಿದೆಬ್ಬಿಸಿದ ಕನ್ನಡದ ಮೇಷ್ಟ್ರಿಗೆ ನಮನ.

–ಲಲಿತಾ ಅಂಬಾಗಿಲು, ಉಪ್ಪುಂದ

## ಹುಬ್ಬಾಟದ ಪ್ರಚಾರ

'ಬಿಗ್ ಬಾಸ್' ವಿಜೇತ ಪ್ರಥಮ್ ಈಗ ತಮ್ಮ ಹುಬ್ಬಾಟಗಳಿಂದ ಗಮನ ಸೆಳೆಯುತ್ತ ಪ್ರಚಾರ ಪಡೆಯಲು ಯತ್ನಿಸುತ್ತಿದ್ದಾರೆ. ಇವರಂತೆ ಇದ್ದಕ್ಕಿದ್ದಂತೆ ಗೆಲುವಿನ ಸೋಪಾನ ಏರಿದ ಕೆಲವು ಯುವಕರು ಸರಿಯಾದ ಮಾರ್ಗದರ್ಶಕರಿಲ್ಲದೆ ಜೀವನದಲ್ಲಿ ಸೋಲನ್ನು ಉಂಡು ಸಾವಿನ ಹಾದಿಯನ್ನು ತುಳಿದಿದ್ದಾರೆ. ಇದು ಸರಿಯಲ್ಲ, ಗೆಲುವನ್ನು ಬಳಸಿಕೊಂಡು ಅಭಿಮಾನಿಗಳ ಪ್ರೋತ್ಸಾಹವನ್ನು ಉಳಿಸಿಕೊಂಡು ಎತ್ತರಕ್ಕೆ ಬೆಳೆಯಬೇಕು.

–ಎಸ್. ವಿಜಯಕುಮಾರಿ, ಬೆಂಗಳೂರು

## ವೀಕ್ಷಕರ ಸಂಘ

ನಮ್ಮ ಬಡಾವಣೆಯಲ್ಲಿ ನಮ್ಮದೇ ಆದ ಹಿರಿಯ ನಾಗರಿಕ ಮಹಿಳೆಯರ ಸ್ನೇಹ ಕೂಟ ಒಂದನ್ನು ಮಾಡಿಕೊಂಡಿದ್ದೇವೆ. ವಿವಾಹವಾಗಿ 35–40 ವರ್ಷಗಳಲ್ಲಿ ಸಿಹಿ ಕಹಿಗಳನ್ನೆಲ್ಲಾ ಉಂಡಿರುವ ನಾವು ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತೇವೆ.

ಜೊತೆಗೆ 'ಕಿನ್ನರಿ'ಯಲ್ಲಿನ ಮಣಿಯ ಅಜ್ಜಿ ಗಾಯತ್ರಿಯನ್ನು, 'ಕುಲವಧು'ವಿನ ಅಜ್ಜಿ ಕಮಲಮ್ಮ ಮತ್ತು ಸೊಸೆ ಕಾಂಚನಾಳನ್ನು ಪುಟ್ಟ ಗೌರಿಯ ಸಾಗರಿಯನ್ನು ಮತ್ತು 'ಅಗ್ನಿಸಾಕ್ಷಿ'ಯ ಚಂದ್ರಿಕಾಳ ಬಗ್ಗೆ ಚರ್ಚಿಸುತ್ತೇವೆ. ಏಕೆಂದರೆ ನಮ್ಮ ಜೀವನದಲ್ಲಾಗಲೀ, ನಮ್ಮ ಬಡಾವಣೆಯ ಯಾರ ಮನೆಗಳಲ್ಲೇ ಆಗಲಿ ಅಥವಾ ನೆಂಟರಿಷ್ಟರ ಮನೆಗಳಲ್ಲಾಗಲೀ ಈ ರೀತಿಯ ಮನೆಹಾಳು ಅಥವಾ ಹೆಣ್ಣಿನ ಜೀವನವನ್ನು ಹಾಳುಮಾಡಲು ಸಕಲ ಪ್ರಯತ್ನ ಮಾಡುವ ಮಹಿಳೆಯರು ಕಣ್ಣಿಗೆ ಬಿದ್ದಿಲ್ಲ. ನಿಮಗೆ ಎಲ್ಲಾದರೂ ಕಂಡರೆ ನಮಗೆ ತೋರಿಸಿ ಎಂದು ಉಳಿದ ಹಿರಿಯ ನಾಗರಿಕ ಮಹಿಳೆಯರನ್ನು ಕೇಳುವ ಮೊದಲು ಎಲ್ಲಾ ಧಾರಾವಾಹಿಗಳ ನಿರ್ದೇಶಕರು ದಯವಿಟ್ಟು ವಸ್ತುಸ್ಥಿತಿಗೆ, ಹತ್ತಿರವಾಗಿ ಕಣ್ತೆರೆದು ಸಮಾಜವನ್ನು ನೋಡಲಿ.

–ಶಾಂತಾ ನಾಗರಾಜ್ ಕೆ. ಬೆಂಗಳೂರು

ವಾರದ ಪತ್ರ

## ಸುಧಾರಿತ 'ಥಟ್'

ಹಲವು ಕನ್ನಡ ವಾಹಿನಿಗಳ ಸ್ಪರ್ಧೆಯ ಮಧ್ಯೆಯೂ, ಕನ್ನಡ ಚಂದನ ವಾಹಿನಿಯಲ್ಲಿ ಅನೇಕ ಜನಪ್ರಿಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಇತ್ತೀಚಿಗೆ 'ಥಟ್ ಅಂತಾ ಹೇಳಿ' ಕಾರ್ಯಕ್ರಮ ಹೊಸ ವಿನ್ಯಾಸದೊಂದಿಗೆ ಪ್ರಸಾರಗೊಳ್ಳುತ್ತಿದೆ. ಹೊಸ ಸೆಟ್ ಜನಮನವನ್ನು ಸೂರೆಗೊಳ್ಳುತ್ತಿದೆ. ಸಾಮಾನ್ಯ ಪ್ರೇಕ್ಷಕರೇ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದೂ ಒಂದು ವೈಶಿಷ್ಟ್ಯ.

ಈ ಕಾರ್ಯಕ್ರಮದ ವಿಶಿಷ್ಟತೆ ಏನೆಂದರೆ ಪ್ರತಿ ಕಾರ್ಯಕ್ರಮದಲ್ಲೂ ಒಂದು ಹೊಸ ಪುಸ್ತಕದ ಪರಿಚಯ ಮಾಡಿಕೊಡುತ್ತಾರೆ. ಕಾರ್ಯಕ್ರಮದ ನಿರೂಪಕರಾದ ಡಾ. ನಾ. ಸೋಮೇಶ್ವರ ಇವರು ಪರಿಚಯ ಮಾಡುವ ರೀತಿ ಅಮೋಘ. ಅಲ್ಪ ಸಮಯದಲ್ಲಿ ಇಡೀ ಪುಸ್ತಕದ ಹೂರಣದ ರುಚಿ ತೋರಿಸಿ ಪುಸ್ತಕ ಪ್ರಿಯರಿಗೆ ಪುಸ್ತಕವನ್ನು ಇಡಿಯಾಗಿ ಓದುವ ಇಚ್ಛೆಯನ್ನು ಕುದುರಿಸುತ್ತಾರೆ.

–ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಸೃಜನ್‌ಗೆ ಮಜಾ!

ಮಜಾ ಟಾಕೀಸ್‌ನಲ್ಲಿ ಬರುವ 'ಮಜಾ' ಕಾರ್ಯಕ್ರಮ ಇಷ್ಟವಾಗುತ್ತದೆ. ಕಾರ್ಯಕ್ರಮಕ್ಕೆ ಕರೆದು ಅಭಿನಂದಿಸುವ ವಿಧಾನ ಮಾತ್ರ ಸರಿಯಲ್ಲ ಎನಿಸುತ್ತದೆ. ಅಂದರೆ ಸೃಜನ್ ಹೆಣ್ಣುಮಕ್ಕಳನ್ನು ಅಪ್ಪಿಯೇ ಅಭಿನಂದಿಸಬೇಕೆ? ಕೈಮುಗಿದು, ಹಸ್ತಲಾಘವ ನೀಡಿ ಅಭಿನಂದಿಸುವುದು ಉಚಿತವಲ್ಲವೆ?

–ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ

## ಅದ್ಭುತ ಸರೆಗಮಪ

ಝೀ ಟಿವಿಯಲ್ಲಿ ಪ್ರಸಾರವಾದ 'ಸರೆಗಮಪ' ಒಂದು ಅದ್ಭುತ ಕಾರ್ಯಕ್ರಮ. ಮೊದಲಿನಿಂದ ಕೊನೆಯವರೆಗೂ ಎಲ್ಲರನ್ನೂ ರಂಜಿಸಿದ ಕಾರ್ಯಕ್ರಮ. ಶ್ರೀಹರ್ಷ ಅವರಂತೂ ಅದ್ಭುತವಾದ ಪ್ರತಿಭೆ, ಎಲ್ಲ ಹಂತದಲ್ಲೂ ಉತ್ತಮವಾಗಿ ತಮ್ಮ ಕಲೆಯನ್ನು ತೋರಿಸಿದ್ದರು. ಅಂತಿಮ ಹಂತದಲ್ಲಿ ತೀರ್ಪು ಆಘಾತ ತಂದಿತು. ಒಳ್ಳೆಯತನ, ಸರಳತೆ, ಮುಗ್ಧತೆಗೆ ಬೆಲೆ ಬೇಕಾದರೆ ಬೇರೆಯದೇ ವೇದಿಕೆಗಳಿವೆ. ಅಪ್ಪಟ ಸಂಗೀತ ಪ್ರತಿಭೆಗೆ ಪ್ರೇಕ್ಷಕರ ಹೃದಯದಲ್ಲಿ ಎಂದೋ ಮೊದಲ ಸ್ಥಾನ ಸಿಕ್ಕಿದೆ. ಶ್ರೀಹರ್ಷ ಒಳ್ಳೆಯ ಸಂಗೀತಗಾರನಾಗಿ ಸಾಧಕನಾಗಿ ಬೆಳೆಯಲಿ.

–ಕೆ.ಜಿ. ವೀಣಾ, ಶಿವಮೊಗ್ಗ

## ಹಿಂದೋಡುವ ಕಾಲ

ಆಗಸ್ಟ್ 26, ಶನಿವಾರ ರಾತ್ರಿ 9–20ಕ್ಕೆ ಉದಯವಾಹಿನಿಯ ಹರಟೆ ಕಾರ್ಯಕ್ರಮ ವೀಕ್ಷಿಸುತ್ತಿದ್ದೆ. ಕಾರ್ಯಕ್ರಮದ ಮಧ್ಯೆ ಬ್ರೇಕ್‌ನಲ್ಲಿ ಒಂದು ಜಾಹೀರಾತು ತೆರೆಯ ಮೇಲೆ ಮೂಡಿತು.

'ಬ್ಲಾಕ್‌ಬಸ್ಟರ್ ಮೂವಿ ಶಿವರಾಜ್‌ಕುಮಾರ್ ಅಭಿನಯದ ಶ್ರೀಕಂಠ ಇಂದು ಸಂಜೆ 6ಕ್ಕೆ ತಪ್ಪದೇ ವೀಕ್ಷಿಸಿ'. ನನಗೊಮ್ಮೆ ದಿಗ್ಭ್ರಮೆಯಾಯಿತು. ಸಂಜೆಯಲ್ಲ, ಪೂರ್ಣಕತ್ತಲು, ವೇಳೆ ನೋಡಿದೆ, ರಾತ್ರಿ 9–25. ಹಾಗಾದರೆ ಇನ್ನು ಸಂಜೆ ಬರುವುದು ಯಾವಾಗ? ಚಲನಚಿತ್ರ ಪ್ರಸಾರವಿದ್ದದ್ದು ಮರುದಿನ ಭಾನುವಾರ ಸಂಜೆ 6ಕ್ಕೆ. ಅಂದು ಭಾನುವಾರ. ಬೆಳಗಿನಿಂದ ಸಂಜೆಯವರೆಗೆ 100 ಬಾರಿ ತೋರಿಸಿ ನಮ್ಮ ತಲೆ ತಿನ್ನಬೇಕಿದ್ದ ಜಾಹೀರಾತದು.

–ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಟಿವಿಗೆ ಹಿಂದಿ ಕನ್ನಡಿಯೇ?

ವ್ಯವಹಾರದ ದೃಷ್ಟಿಯಿಂದ ನಮ್ಮ ಬಹಳಷ್ಟು ವಾಹಿನಿಗಳು ಈಗ ಪರಭಾಷೀಯರ ಆಡಳಿತದಲ್ಲಿವೆ. ಹಾಗಾಗಿ ಕನ್ನಡದಲ್ಲಿ ನಿರ್ಮಾಣವಾಗುವ ಎಲ್ಲ ಕಾರ್ಯಕ್ರಮಗಳೂ ಹಿಂದಿಯದರ ಕನ್ನಡ ಅವತರಣಿಕೆಗಳಾಗಿವೆ. ಇದರಲ್ಲಿ ತಪ್ಪೇನಿಲ್ಲ. ಆದರೆ ಆ ಕಾರ್ಯಕ್ರಮಗಳು ನಮ್ಮ ಪರಿಸರಕ್ಕೆ ಹೊಂದುವಂತೆ ಇರಬೇಕಲ್ಲವೇ? ಧಾರಾವಾಹಿಗಳ ಮೂಲ ಕಥೆಯನ್ನು ಯಥಾರೀತಿಯಲ್ಲಿ ಇಟ್ಟುಕೊಂಡು, ನಮ್ಮ ಆಚಾರ, ವಿಚಾರ, ರೀತಿ ರಿವಾಜುಗಳಿಗೆ ಹೊಂದುವಂತಿರಬೇಕು. ಧಾರಾವಾಹಿಗಳಲ್ಲಿನ ಸಂದರ್ಭಗಳು, ಅಲ್ಲಿಯ ಪಾತ್ರಗಳ ನಡವಳಿಕೆ ನಮ್ಮದಕ್ಕಿಂತ ಬೇರೆಯದೇ ಇರುತ್ತದೆ. ಅದಕ್ಕೆ ತಕ್ಕ ಸಂಭಾಷಣೆ ಹಿಂದಿಯಲ್ಲಿ ಇರುತ್ತದೆ. ಅದನ್ನೇ ಪದರೀತಿ ಭಾಷಾಂತರಿಸಿದರೆ ಅಲ್ಲಿರಬೇಕಾದ ಭಾವನೆ ವ್ಯಕ್ತವಾಗುವುದಿಲ್ಲ. ಪಾತ್ರಗಳ ಪೋಷಾಕು, ನಡೆ–ನುಡಿ, ಮನೆಯ ಪರಿಸರ ಇವೆಲ್ಲಾ ಒಟ್ಟಾಗಿ ನಾವು ನೋಡುತ್ತಿರುವುದು ಕನ್ನಡದ ಕಾರ್ಯಕ್ರಮ ಎನಿಸುವುದೇ ಇಲ್ಲ.

–ಶ್ರೀನಾಥ್ ಕೊನೇಟಿ, ಬೆಂಗಳೂರು

## ಗೋಜಲು ಬೇಡ

'ನಾಗಿಣಿ'ಯಲ್ಲಿ ಪ್ರಾರಂಭದಲ್ಲಿ ನಾಗಮಣಿಯ ಹಿಂದೆ ಬಿದ್ದಿದ್ದ ಪ್ರಮುಖ ಪಾತ್ರಗಳಾದ ಭೈರವ ಬಾಬಾ, ರುದ್ರ, ವಿಷ್ಣು, ನಾಗಿಣಿಯ ಸಾಕು ತಾಯಿ–ತಂದೆ, ಅವರ ಚಿಕ್ಕಪ್ಪ, ಚಿಕ್ಕಮ್ಮ, ಗರುಡ ರೂಪದಲ್ಲಿ ಬಂದಿದ್ದ ಕಾನಿಷ್ಕನೆಂಬ ಸರ್ಪ ಎಲ್ಲರೂ ಮಾಯವಾಗಿಬಿಟ್ಟಿದ್ದಾರೆ. ಅರ್ಜುನನ ಜನ್ಮರಹಸ್ಯ, ತ್ರಿವೇಣಿಯ ಹಿನ್ನೆಲೆ... ಹೀಗೆ ಅನಗತ್ಯವಾದ ತಿರುವುಗಳಿಂದ ಕಥೆಯ ಸಾರವೇ ಮಾಯವಾಗಿಬಿಟ್ಟಿದೆ.

–ಶ್ರುತಿ ಕೆ.ಎಸ್., ತುರುವೇಕೆರೆ